<u>ದಿ:**21.04.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>

<u>ಪಾಟೀ ಸವಾಲು</u>:- ಪಿರ್ಯಾದಿ ಪರ S.S.P., ವಕೀಲರಿಂದ:-

ನಾನು ಬಿ ಎ ಪದವಿ 2 ವರ್ಷ ವಿದ್ಯಾಬ್ಯಾಸ ಮಾಡಿರುತ್ತೇನೆ. ನನಗೆ ಪಿರ್ಯಾದಿ ಪರಿಚಯ ಇರುವುದಿಲ್ಲ . ನಾನು ಇದೇ ನ್ಯಾಯಾಲಯದಲ್ಲಿ ಪಿರ್ಯಾದಿ , ಮಂಜುನಾಥ , ಮಹಾಂತೇಶ್ , ಲೋಕೇಶ್ ರವರ ವಿರುದ್ದ P.C.R. 19/2022 ರಂತೆ ಖಾಸಗಿ ದೂರು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ P.C.R. 19/2022 ನನ್ನ ಮಾಹಿತಿಯಂತೆ ಸಲ್ಲಿಸಿರುತ್ತೇನೆ ಎಂದರೆ ಸರಿ. ನಿಡಿ 12 2 ಪುಟದಲ್ಲಿ ನನಗೆ ಪಿರ್ಯಾದಿ ಮಹಾಂತೇಶ್ ಮತ್ತು ಮಂಜುನಾಥ, ಮಹಾಂತೇಶ್ ಮತ್ತು ಲೋಕೇಶ್ ಎಂಬುವವರು ಸ್ನೇಹಿತರು ಎಂದು ನಮೂದು ಮಾಡಿರುತ್ತೇನೆ ಎಂದರೆ ಸಾಕ್ಷಿ ನನಗೆ ಪಿರ್ಯಾದು ಪರಿಚಯ ಇರುವುದಿಲ್ಲ

ಎಂದು ತಿಳಿಸಿರುತ್ತೇನೆ . ನಾನು ಸದರಿ P.C.R. 19/2022 ರಂತೆ ಖಾಸಗಿ ದೂರನ್ನು ಈ ಪ್ರಕರಣ ನನ್ನ ವಿರುದ್ಧ ದಾಖಲಾದ ನಂತರ ಪಿರ್ಯಾದಿ ಮತ್ತು ಇತರರ ವಿರುದ್ಧ ಸಲ್ಲಿಸಿರುತ್ತೇನೆ . ನಿಪಿ 5 ರಲ್ಲಿ ನನ್ನ ವಿಳಾಸ ಭರತ್ ಕುಮಾರ್ ಜೆ ಹೆಚ್ ತಂದೆ ಹಾಲಪ್ಪ , ವಯಸ್ಸು 30 ವರ್ಷ , ಬಸವೇಶ್ವರ ನಿಲಯ , ರಾಮಾಲಯ ರಸ್ತೆ , ಜಗಳೂರು ಪಟ್ಟಣ ಇರುತ್ತದೆ ಎಂದರೆ ಸರಿ. ನಿಪಿ 5 ವಾಪಾಸದ ಅಂಚೆ ಲಕೋಟೆಯಲ್ಲಿರುವ ವಿಳಾಸವನ್ನು ಓದಿ ತಿಳಿಸಿದಾಗ ಸಾಕ್ಷಿ ಒಪ್ಪಿರುತ್ತಾರೆ . ನಮ್ಮ ವಕೀಲರು ಪಿರ್ಯಾದಿಯನ್ನು ಈ ಹಿಂದೆ ಪಾಟೀ ಸವಾಲು ಮಾಡಿರುತ್ತಾರೆ , ಸದರಿ ಪಾಟೀ ಸವಾಲು ಮಾಡಲು ನಮ್ಮ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ . ನಿಪಿ 5 ಅಂಚೆ ಲಕೋಟೆಯಲ್ಲಿ ನಮೂದಾಗಿರುವ ವಿಳಾಸವು ನನ್ನದೇ ಇದ್ದು , ಸದರಿ ವಿಳಾಸಕ್ಕೆ ನನ್ನ ಎಲ್ಲಾ ನೆಂಟರು ಸಂಬಂಧಿಕರು ಬರುತ್ತಾರೆ ಎಂದರೆ ಸರಿ. ಭರತ್ ರಾಜ್ ಎಂಬುವವರು ನನ್ನ ವಿರುದ್ಧ ಇದೇ ನ್ಯಾಯಾಲಯ ಚೆಕ್ ಅಮಾನತು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ. ನಮ್ಮ ವಕೀಲರಿಗೆ ಪಾಟೀ ಸವಾಲು ಮಾಡುವಾಗ ನಿಪಿ 5 ಅಂಚೆ ಲಕೋಟೆಯಲ್ಲಿ ಇರುವ ವಿಳಾಸ ನನ್ನದು ಇರುವುದಿಲ್ಲ ಎಂದು ನಾನೇ ಮಾಹಿತಿ ನೀಡಿರುತ್ತೇನೆ . ನಾನು ನನ್ನ ವಕೀಲರ ಮೂಲಕ ಈ ಪ್ರಕರಣದಲ್ಲಿ ವಕಾಲತ್ ಸಲ್ಲಿಸುವಾಗ ನನ್ನ ಸಹಿ ಜೋತೆಗೆ ನನ್ನ ಮನೆಯ ವಿಳಾಸವನ್ನು ಸಲ್ಲಿಸಿರುತ್ತೇನೆ . ನಾನು ಸಲ್ಲಿಸಿದ ವಕಾಲತ್ ನಲ್ಲಿ ಇರುವ ವಿಳಾಸ ನಿಪಿ 5 ಅಂಚೆ ಲಕೋಟೆಯಲ್ಲಿ ಇರುವ ವಿಳಾಸ ಒಂದೇ ಎಂದರೆ ಸರಿ. ಸಾಕ್ಷಿ ಮುಂದುವರೆಸಿ ನನಗೆ ನೋಟೀಸ್ ತಲುಪಿರುವುದಿಲ್ಲ ಎಂದು ಹೇಳುತ್ತಾರೆ . ಪಿರ್ಯಾದಿಯು ನನ್ನನ್ನು ಬಿಟ್ಟು ರುದ್ರೇಶ್ ಎಂಬುವವರ ವಿರುದ್ಧ ಇದೇ ರೀತಿ ಚೆಕ್ ಅಮಾನತು ಪ್ರಕರಣ ದಾಖಲಿಸಿರುತ್ತದೆ . ಸದರಿ ಮಾಹಿತಿ ನನಗೆ ಈ ಎರಡು ವರ್ಷಗಳ ಹಿಂದೆ ರುದ್ರೇಶ್ ಎಂಬುವವರಿಂದ ತಿಳಿದಿರುತ್ತದೆ . ನನಗೆ ಸದರಿ ಪ್ರಕರಣ ಯಾವ ಹಂತದಲ್ಲಿ ಇರುತ್ತದೆ ಎಂದು ನನಗೆ ಗೋತ್ತಿರುವುದಿಲ್ಲ . ನಿಪಿ 2 ಮತ್ತು 3 ದಾಖಲೆಗಳನ್ನು ನಾನು ಪಿರ್ಯಾದಿಯು ಇದೇ ರೀತಿ ಬೇರೆಯವರ ವಿರುದ್ಧ ಚೆಕ್ ಗಳನ್ನು ದುರುಪಯೋಗ ಪಡಿಸಿಕೊಂಡು ಚೆಕ್ ಅಮಾನತು ಪ್ರಕರಣ ದಾಖಲಿಸಿರುವುದನ್ನು ತೋರಿಸಲು ಸಲ್ಲಿಸಿರುತ್ತೇನ . ನನಗೆ ನಿಡಿ 7 ರಲ್ಲಿ ನಮೂದಿರುವ ರುದ್ರೇಶ್ ಪರಿಚಯ ಎಂದರೆ ಸರಿಯಲ್ಲ. ನನಗೆ ಸದರಿ ಪ್ರಕರಣದ ಮಾಹಿತಿಯು 2 ವರ್ಷದ ಹಿಂದೆ ಈ ಪ್ರಕರಣದ ಮುದ್ದತ್ತಿಗೆ ಬಂದಾಗ ತಿಳಿಯುತ್ತದೆ . ಸದರಿ ರುದ್ರೇಶ್ ಅವರು ನನಗೆ ನಿಡಿ 7 ಪ್ರಕಣದ ಮಾಹಿತಿ ತಿಳಿಸಿರುತ್ತಾರೆ . ನಾನು ಸದರಿ ರುದ್ರೇಶ್ ಅವರ ವಿರುದ್ಧ ಸಲ್ಲಿಸಿದ ಪ್ರಕರಣದ ಯಾವ ಹಂತದಲ್ಲಿ ಇರುತ್ತದೆ ನಾನು ವಿಚಾರಣೆ ಮಾಡಿರುವುದಿಲ್ಲ . ಸದರಿ ಪ್ರಕರಣದಲ್ಲಿ

ರುದ್ರೇಶ್ ಅವರು ಪಿರ್ಯಾದಿಯೊಂದಿಗೆ ರಾಜೀ ಮಾಡಿಕೊಂಡು ಪ್ರಕರಣ ಮುಕ್ತಾಯವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ . ನಾನು ನನ್ನ ಸಾಕ್ಷಿ ವಿಚಾರಣೆಯಲ್ಲಿ ಪಿಸಿಆರ್ ಮತ್ತು ರುದ್ರೇಶ್ ಅವರ ಪ್ರಕರಣಗಳನ್ನು ಹೊರತು ಪಡಿಸಿ ಬೇರೆ ಯಾರ ಪ್ರಕರಣಗಳ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ .

( ಈ ಹಂತದಲ್ಲಿ ಪಿರ್ಯಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಆಲಿಸಿ ಸಮಯ ನೀಡಲಾಯಿತು )

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು, ಜಗಳೂರು